**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 69 ಪ್ರಾ.ಸಾ. : 27**

ಸಾಕ್ಷಿಯ ಹೆಸರು : ರಾಮಚಂದ್ರ ಈಶ್ವರ್ ನಾಯಕ್
ತಂದೆಯ ಹೆಸರು : ಈಶ್ವರ್ ನಾಯಕ್
ವಯಸ್ಸು : 64 ವರ್ಷ
ಉದ್ಯೋಗ : ಕೂಲಿ ಕೆಲಸ.
ವಾಸ : ಕಾನಗೋಡು.

**ದಿನಾಂಕಃ 20-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು 35 ವರ್ಷಗಳಿಂದ ಕಾನಗೋಡು ಗ್ರಾಮದಲ್ಲಿ ವಾಸ ಇದ್ದೇನೆ. ಆರೋಪಿಯು ಊರಿನವರು ಆಗಿದ್ದರಿಂದ ಪರಿಚಯ ಇದ್ದಾನೆ. ಕಾನಗೋಡು ಗ್ರಾಮದಲ್ಲಿ ನನ್ನ ಮನೆ ಇದೆ. ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ 2001-02 ರಲ್ಲಿ ರೂ.20 ಲಕ್ಷ ಮಂಜೂರಾಗಿತ್ತು ಮತ್ತು ಆ ಬಗ್ಗೆ 210 ಫಲಾನುಭವಿಗಳನ್ನು ಆಯ್ಕೆ ಮಾಡಿದ್ದರು ಮತ್ತು ನಾನು ಸಹ ಅದರಲ್ಲಿ ಫಲಾನುಭವಿ ಆಗಿದ್ದೆ. ನನಗೆ ಸದರಿ ಯೋಜನೆ ಅಡಿಯಲ್ಲಿ ಕೊಡಬೇಕಾಗಿದ್ದ ಸಹಾಯ ಧನ ರೂ.3000/- ಅನ್ನು ಪಾವತಿ ಮಾಡಿರುವುದಿಲ್ಲ. ನನಗೆ ಸಹಾಯಧನ ರೂ.3000/- ಬರಬೇಕಿತ್ತು ಎಂಬ ವಿಚಾರವೇ ಗೊತ್ತಿರಲಿಲ್ಲ ಈಗ ನ್ಯಾಯಾಲಯಲದಿಂದ ಸಾಕ್ಷಿ ಕರೆ ಪತ್ರ ಬಂದ ನಂತರ ಅದು ಗೊತ್ತಾಗಿರುತ್ತದೆ. ಸದರಿ ಯೋಜನೆ ಅಡಿಯಲ್ಲಿ ನನ್ನ ಮನೆಯಲ್ಲಿ ಶೌಚಾಲಯ ನಿರ್ಮಾಣ ಮಾಡಿರುವುದಿಲ್ಲ. ಈತ್ತೀಚೆಗೆ ನಾನು ಹೊಸದಾಗಿ ಶೌಚಾಲಯ ನಿರ್ಮಾಣ ಮಾಡಿಕೊಂಡಿದ್ದೇನೆ. ಆರೋಪಿ ನಮ್ಮ ಗ್ರಾಮ ಪಂಚಾಯತಿಯ ಅಧ್ಯಕ್ಷ ಆಗಿದ್ದರು ಎಂದು ಬೇರೆಯವರು ತಿಳಿಸಿದ್ದರಿಂದ ನಾನು ತಿಳಿದುಕೊಂಡಿರುತ್ತೇನೆ. ನಾನು ಅವಿದ್ಯಾವಂತ ಆ ವಿಚಾರ ಎಲ್ಲಾ ನನಗೆ ಖುದ್ದಾಗಿ ಗೊತ್ತಿರಲಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ**

2. 2001-02 ರಲ್ಲಿ ಕಾನಗೋಡು ಗ್ರಾಮದಲ್ಲಿ ನನ್ನ ಸ್ವಂತ ಹೆಸರಿನಲ್ಲಿ ಮನೆ ಇರಲಿಲ್ಲ, ನನ್ನ ತಂದೆ ಈಶ್ವರ ನಾಯಕರವರ ಹೆಸರಿನಲ್ಲಿ ಆಗ ನನಗೆ ಮನೆ ಇತ್ತು. 2001-02 ರಲ್ಲಿ

ಶೌಚಾಲಯ ಮಂಜೂರು ಮಾಡುವಂತೆ ನಾನು ಅರ್ಜಿಯನ್ನು ಕೊಟ್ಟಿರಲಿಲ್ಲ. 2001-02 ರಲ್ಲಿ ಸ್ವಚ್ಛ ಗ್ರಾಮ ಯೋಜನೆ ಬಂದ ವಿಚಾರ ನನಗೆ ಗೊತ್ತಿರಲಿಲ್ಲ. ಆ ಯೋಜನೆ ಅಡಿಯಲ್ಲಿ ಎಷ್ಟು ಹಣ ಬಿಡುಗಡೆ ಆಗಿತ್ತು ಎಂದು ನನಗೆ ಗೊತ್ತಿರಲಿಲ್ಲ. ಮುಖ್ಯ ವಿಚಾರಣೆಯಲ್ಲಿ 2001-02 ರಲ್ಲಿ ಸದರಿ ಯೋಜನೆ ಅಡಿಯಲ್ಲಿ ನಾನು ಫಲಾನುಭವಿ ಆಗಿ ಆಯ್ಕೆ ಆಗಿದ್ದೆ ಎಂದು ನಾನು ಹೇಳಿರುವುದು ಸುಳ್ಳು ಇದೆಯಾ ಅಥವಾ ಸತ್ಯ ಇದೆಯಾ ಎಂದರೆ ನಾನು ಅವಿದ್ಯಾವಂತ ಇದ್ದೇನೆ ನನಗೆ ಏನೂ ಗೊತ್ತಿಲ್ಲ. ನಾನು ಫಲಾನುಭವಿ ಆಗಿದೆ ಎನ್ನುವ ಬಗ್ಗೆ ನನ್ನ ಬಳಿ ದಾಖಲಾತಿ ಇಲ್ಲ. ಈಗ ನನ್ನ ಹೆಸರಿನಲ್ಲಿ ನನಗೆ ಸ್ವಂತ ಮನೆ ಇದೆ. ಇಂತಹ ಯೋಜನೆ ಅಡಿಯಲ್ಲಿ ಶೌಚಾಲಯ ಮಂಜೂರು ಮಾಡಬೇಕಾದರೆ ಫಲಾನುಭವಿ ಹೆಸರಿನಲ್ಲಿ ಮನೆ ಇರಬೇಕು ಎಂದರೆ ಹೌದು. ನಾನು ಮೇಲೆ ಹೇಳಿದ ಯೋಜನೆಯಲ್ಲಿ ಫಲಾನುಭವಿ ಆಗಿರಲಿಲ್ಲ ಎಂದರೆ ನಾನು ಅವಿದ್ಯಾವಂತ ನನಗೆ ಗೊತ್ತಿಲ್ಲ. ಆರೋಪಿ ನನ್ನ ಬಳಿ ಬಂದು ನನ್ನನ್ನು ಫಲಾನುಭವಿಯಾಗಿ ಆಯ್ಕೆ ಮಾಡಿರುವುದಾಗಿ ಯಾವತ್ತೂ ಹೇಳಿರುವುದಿಲ್ಲ. ಯಾವ ವರ್ಷದಲ್ಲಿ ಆರೋಪಿ ಅಧ್ಯಕ್ಷ ಆಗಿದ್ದ ಎಂದು ಇಸವಿ ಗೊತ್ತಿಲ್ಲ. ನಾನು ಫಲಾನುಭವಿ ಅಲ್ಲದೇ ಇದ್ದರೂ ಪೊಲೀಸನವರ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

ನ್ಯಾಯಾಲಯದ ಪ್ರಶ್ನೆಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ